4) **<u>ಲಿಖಿತ ಪರೀಕ್ಷೆ:</u>**

ಅರ್ಹ ಅಭ್ಯರ್ಥಿಗಳಿಗೆ 150 ಅಂಕಗಳಿಗೆ ವಸ್ತುನಿಷ್ಠ ಮಾದರಿಯ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ ನಡೆಸಲಾಗುವುದು.

**A) ಇಇಜಿ ತಂತ್ರಜ್ಞರು ಮತು ಪ್ರಯೋಗಾಲಯ ಸಹಾಯಕರ (ಫೋಟೋಗ್ರಫಿ)**

ಅರ್ಹ ಅಭ್ಯರ್ಥಿಗಳಿಗೆ

i) ಪತ್ರಿಕೆ –1:

**ಸಾಮಾನ್ಯ ಪತ್ರಿಕೆ**–ಸಾಮಾನ್ಯ ಅಧ್ಯಯನ, ಸಾಮಾನ್ಯ ವಿಜ್ಞಾನಕ್ಕೆ ಸಂಭಂದಿಸಿದ ಎಲ್ಲಾ ವಿಷಾಯಾಧಾರಿತ ಪ್ರಶ್ನೆಗಳನ್ನು ಒಳಗೊಂಡಿರತಕ್ಕದ್ದು– 75 ಅಂಕಗಳಿಗೆ

(75 ಪ್ರಶ್ನೆ, 1 ಪ್ರಶ್ನೆಗೆ, 1 ಅಂಕ )

[ಸಮಯ: 01 ಗಂಟೆ 30 ನಿಮಿಷಗಳು]

ii) ಪತ್ರಿಕೆ–2 ನಿರ್ದಿಷ್ಠ ಪತ್ರಿಕೆ –ವಿಷಯಾಧಾರಿತ ಪ್ರಶ್ನೆ ಪತ್ರಿಕೆಯಾಗಿದ್ದು ಆಯಾ ವಿಷಯಗಳಿಗೆ ಸಂಬಂಧಿದ ಪ್ರಶ್ನೆಗಳನ್ನು ಒಳಗೊಂಡಿರತಕ್ಕದ್ದು – 75 ಅಂಕಗಳು

(75 ಪ್ರಶ್ನೆ, 1 ಪ್ರಶ್ನೆಗೆ, 1 ಅಂಕ )

[ ಸಮಯ:01 ಗಂಟೆ 30 ನಿಮಿಷಗಳು]

iii) ಯಾವುದೇ ರೀತಿಯ ಋಣಾತ್ಮಕ ಅಂಕಗಳು ಇರುವುದಿಲ್ಲ.

**B) ಪ್ರಯೋಗಾಲಯ ಸೇವಕರು**

i) ಪತ್ರಿಕೆ – 1

ಸಾಮಾನ್ಯ ಪತ್ರಿಕೆ–ಸಾಮಾನ್ಯ ಅಧ್ಯಯನ, ಸಾಮಾನ್ಯ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲಾ ವಿಷಾಯಾಧಾರಿತ ಪ್ರಶ್ನೆಗಳನ್ನು ಒಳಗೊಂಡಿರತಕ್ಕದ್ದು– 150 ಅಂಕಗಳಿಗೆ

(100 ಪ್ರಶ್ನೆ, 1 ಪ್ರಶ್ನೆ, 1.5 ಅಂಕ)

[ ಸಮಯ:02 ಗಂಟೆ ]

ii) ಯಾವುದೇ ರೀತಿಯ ಋಣಾತ್ಮಕ ಅಂಕಗಳು ಇರುವುದಿಲ್ಲ.

5) **<u>ಪಠ್ಯಕ್ರಮ</u>**

ಪ್ರತಿ ಹುದ್ದೆಗೆ ನಿಗಧಿಪಡಿಸಲಾಗಿರುವ ವಿದ್ಯಾರ್ಹತೆಯನುಸಾರ ಪಠ್ಯಕ್ರಮವನ್ನು ತಯಾರಿಸಿ, ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.in ನಲ್ಲಿ ಪ್ರಕಟಿಸಲಾಗುವುದು.

**6) <u>ಆಯ್ಕೆ ವಿಧಾನ</u>**

ಎ) ಸದರಿ ಅಧಿಸೂಚನೆಯಲ್ಲಿ ನಮೂದಿಸಿದ ಖಾಲಿ ಹುದ್ದೆಗಳ ವರ್ಗೀಕರಣವು ಈಗಾಗಲೇ ಜಾರಿಯಲ್ಲಿರುವ ಸೇವಾ ನಿಯಮಾವಳಿಗಳು ಹಾಗೂ ಅಧಿಸೂಚನೆ ನಿಯಮಗಳನ್ನೊಳಗೊಂಡಿರುತ್ತದೆ ಹಾಗೂ ನ್ಯಾಯಾಲಯದ ತೀರ್ಪುಗಳ ಹಾಗೂ ಸರ್ಕಾರದ ಅಧಿಸೂಚನೆಗಳ ಮೇರೆಗೆ ಬದಲಾವಣೆಗೆ ಒಳಪಟ್ಟಿರುತ್ತದೆ.

ಬಿ) ಆಯ್ಕೆ ಸಮಿತಿಯು ಸ್ವೀಕರಿಸಲಾಗುವ ಅರ್ಜಿಗಳನ್ನು ಪರಿಶೀಲಿಸಿ ನಂತರ ಅಭ್ಯರ್ಥಿಗಳು ನೀಡಲಾಗಿರುವ ವಿವರ ಮತ್ತು ಕೋರಲಾಗಿರುವ ಮೀಸಲಾತಿಗಳು ಸರಿಯಿದೆ ಎಂದು ಖಾತ್ರಿ ಪಡಿಸಿದ ಮೇಲೆ ಅಧಿಸೂಚನೆಯಲ್ಲಿ ಪ್ರಕಟಿಸಿದಂತೆ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮತ್ತು ಹಾಲಿ ಚಾಲ್ತಿಯಲ್ಲಿರುವ ನಿಯಮ ಆದೇಶಗಳನ್ವಯ, ಮೀಸಲಾತಿಗಳನುಸಾರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಗಳಿಸಿದ ಅಂಕಗಳು ಒಂದೇ ಆಗಿದ್ದಲ್ಲಿ ಅಂತಹ ಸಂದರ್ಭದಲ್ಲಿ ವಯಸ್ಸಿನ ಆಧಾರದ ಮೇಲೆ ಅಂದರೆ ವಯಸ್ಸಿನಲ್ಲಿ ಹಿರಿಯರಾದವರು ಕಿರಿಯರಿಗಿಂತ ಶ್ರೇಣಿಯಲ್ಲಿ ಮೇಲಿರುತ್ತಾರೆ.

ಸಿ) ಅಭ್ಯರ್ಥಿಗಳು ಎಲ್ಲಾ ವಿಧದಿಂದ ಅರ್ಹತೆ ಹೊಂದಿದ್ದಲ್ಲಿ ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು.

ಡಿ) ಹೊರ ರಾಜ್ಯದ ಅಭ್ಯರ್ಥಿಗಳು ಕರ್ನಾಟಕ ಸಿವಿಲ್ ಸೇವೆಗಳು(ನೇಮಕಾತಿ)(ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1984ರ 2ನೇ ನಿಯಮದ ಪ್ರಕಾರ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಹೊರತು ನೇಮಕ ಹೊಂದಲು ಅರ್ಹರಾಗುವುದಿಲ್ಲ.